O.S.No.329/2015
DW -1

ದಿನಾಂಕ 29/11/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು:- ಶ್ರೀ ಎಸ್.ಆರ್.ಆರ್ ವಾದಿ ಪರ ವಕೀಲರಿಂದ**

ದಾವಾ ಐಟಂ ನಂ-1 ನಮ್ಮ ತಾತನ ಆಸ್ತಿ ಇರುತ್ತದೆ ಎಂದರೆ ಸರಿ. ಸರ್ವೆ ನಂ- 4/1 ಮೂಲತಃ ನಮ್ಮ ತಂದೆ ಮತ್ತು ಅವರ ಅಣ್ಣ ತಮ್ಮಂದಿರ ಹೆಸರಿನಲ್ಲಿತ್ತು ಎಂದರೆ ಸರಿ. ದಾವಾ ಆಸ್ತಿ ನಮ್ಮ ತಾತನ ಆಸ್ತಿ ಆದ ಕಾರಣ ಅದರಲ್ಲಿ 1/3 ಭಾಗ ಇರುತ್ತದೆ ಎಂದರೆ ಸರಿ. ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರು ಪೂರ್ವ ಪಶ್ಚಿಮ ಬದು ಹಾಕಿಕೊಂಡು ಹಂಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಕ್ಷಿಣದ ಕಡೆ ನಮ್ಮ ತಂದೆಗೆ 27 ವರೆ ಗುಂಟೆ , ಮಧ್ಯದ 27 ವರೆ ಗುಂಟೆ ವಾದಿಯ ತಂದೆಗೆ ಹಾಗೂ ಉತ್ತರದ ಕಡೆ 27 ವರೆ ಗುಂಟೆ ನನ್ನ ಚಿಕ್ಕಪ್ಪ ನಂಜಪ್ಪ ಇವರಿಗೆ ಹಂಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಐಟಂ ನಂ-6 ನಮ್ಮ ತಾತನ ಆಸ್ತಿ ಇರುತ್ತದೆ ಎಂದರೆ ಸರಿ. ದಾವಾ ಐಟಂ ನಂ-6 ರಲ್ಲಿ ಮನೆ ಇದ್ದು ಈಗ ಸದರಿ ಮನೆ ಬಿದ್ದು ಹೋಗಿರುತ್ತದೆ ಎಂದರೆ ಸರಿಯಲ್ಲ.

2. ನನ್ನ ತಂದೆಗೆ ಮೂರು ಜನ ಗಂಡು ಮಕ್ಕಳು ಎಂದರೆ ಸರಿ. ನಾವು ಸಣ್ಣ ಹುಡುಗರು ಇದ್ದಾಗ ನಮ್ಮ ತಂದೆ ಸಿದ್ದನಹಳ್ಳಿಯಲ್ಲಿ ಪೆಟ್ಟಿಗೆ ಅಂಗಡಿಯಲ್ಲಿ ವಾಸ ಇದ್ದೇವು. ನಮ್ಮ ತಂದೆಯ ಸಿದ್ದನಹಳ್ಳಿಯ ಮತದಾರ ಪಟ್ಟಿಯಲ್ಲಿ ನಮ್ಮ ಮನೆ ನಂಬರ್ ಮತ್ತು ನಮ್ಮ ಹೆಸರು ಮತ್ತು ನಮ್ಮ ತಂದೆ ಹೆಸರು ಇರುತ್ತದೆ ಎಂದರೆ ಗೊತ್ತಿಲ್ಲ. ಸಿದ್ದನಹಳ್ಳಿಯಲ್ಲಿ ನನ್ನ ಚುನಾವಣಾ ಗುರುತಿನ ಚೀಟಿ ಇರುವುದಿಲ್ಲ. ಅದನ್ನು ಯಾವಾಗ ತಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ, ಈಗ ನಾನು 30 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ಇದ್ದೇನೆ. ಸಿದ್ದನಹಳ್ಳಿಯಲ್ಲಿ ನಮ್ಮ ತಂದೆ

ವಾಸ ಇದ್ದರು. ನಾನು ಬೆಂಗಳೂರಿಗೆ ಹೋಗುವ ಮೊದಲು ನಾನು , ನಮ್ಮ ತಂದೆ , ತಾಯಿ, 1 ನೇ ಪ್ರತಿವಾದಿ ಹಾಗೂ ನಮ್ಮ ತಂಗಿಯರು ವಾಸ ಇದ್ದೇವು.

3. ವಾದಿ ಆ ಕಾಲಕ್ಕೆ ಹಿಂದೂಪುರದಲ್ಲಿ ವಾಸ ಇದ್ದರು. ನನ್ನ ತಮ್ಮ 55 ವರ್ಷಗಳಿಂದ ಹಿಂದೂಪುರದಲ್ಲಿ ವಾಸ ಇರುತ್ತಾರೆ. 55 ವರ್ಷಗಳ ಹಿಂದೆ ವಾದಿ 4 ವರ್ಷದ ಹುಡುಗ ಎಂದರೆ ಸರಿಯಲ್ಲ. 4 ವರ್ಷದ ಹುಗುಡ ಇದ್ದ ಕಾರಣ ತಂದೆ ತಾಯಿ ಬಳಿ ಜಗಳ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ವ್ಯವಸಾಯದ ಕೆಲಸ ಹೊರತುಪಡಿಸಿ ಬೇರೆ ಕೆಲಸ ಬರುತ್ತಿರಲಿಲ್ಲ ಎಂದರೆ ಸರಿ. ದಾವಾ ಐಟಂ ನಂ-1 ರಿಂದ ಬಂದ ಆದಾಯದಿಂದ ಐಟಂ ನಂ-2 ರಿಂದ 5 ನ್ನು ಆಸ್ತಿಗಳನ್ನು ನಮ್ಮ ತಂದೆ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಕೊಂಡುಕೊಳ್ಳುಲು ನಾವೆಲ್ಲರೂ ಉಳುಮೆ ಮಾಡಿ ಬಂದ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಂದೆ ಬದುಕಿದ್ದಾಗ ದಾವಾ ಆಸ್ತಿಗಳು ನಮ್ಮ ತಂದೆ ಹೆಸರಿನಲ್ಲಿ ಇದ್ದವು ಎಂದರೆ ಸರಿ. ನನ ತಂದೆ ತೀರಿಕೊಂಡ ನಂತರ 1996-97 ನೇ ಸಾಲಿನಲ್ಲಿ ನಮ್ಮ ತಾಯಿ ನಂಜಮ್ಮ ಇವರ ಹೆಸರಿಗೆ ಪೌವತಿ ವಾರಸು ಮೇರೆಗೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ.

4. ಈ ದಾವೆಯಲ್ಲಿ ವಾದಿಗಳು ಏನು ಏನು ದಾಖಲೆಗಳು ಸಲ್ಲಿಸಿರುತ್ತಾರೆಂದು ನಾನು ತಿಳಿದುಕೊಂಡಿರುವುದಿಲ್ಲ. ನಮ್ಮ ತಾಯಿ ಖಾತೆ ಬದಲಾವಣೆ ಮಾಡಲು ಅರ್ಜಿ ಕೊಟ್ಟ ಸಂದರ್ಭದಲ್ಲಿ ನಾವು ಮೂರು ಜನ ಅಣ್ಣ ತಮ್ಮಂದಿರು ಒಂದೇ ಮನೆಯಲ್ಲಿದ್ದೇವು ಎಂದರೆ ಸರಿಯಲ್ಲ. ಖಾತೆ ಬದಲಾವಣೆ ಮಾಡುವಾಗ ಗ್ರಾಮ ಲೆಕ್ಕಾಧಿಕಾರಿ ನಮ್ಮನ್ನು ವಿಚಾರಣೆ ಮಾಡಿ ಖಾತೆ ಬದಲಾವಣೆ ಮಾಡುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸಿರುತ್ತಾರೆ. ನಿಪಿ-12 ರಲ್ಲಿ ನಮೂದಿಸಿದ ವಿಷಯ ಸರಿ ಇರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ನಿಪಿ-12 ರಲ್ಲಿರು ವಿಚಾರ ಸರಿ ಇಲ್ಲ ಎಂದು ನಾವು ಎ.ಸಿ ನ್ಯಾಯಾಲಯದಲ್ಲಿ ಅಪೀಲು ಮಾಡಿಲ್ಲ ಎಂದರೆ ಸರಿ.

ನಿಪಿ-1 ರಿಂದ ನಿಪಿ-6 ರಲ್ಲಿ ಕಾಲಂ 10 ರಲ್ಲಿ ಪಿತ್ರಾರ್ಜಿತ ಆಸ್ತಿಗಳು ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಕಾಲಂ ನಂ-10 ರಲ್ಲಿ ಇರುವ ಪಿತ್ರಾರ್ಜಿತ ಎಂದು ಇರುವುದನ್ನು ನಾವು ತಹಸೀಲ್ದಾರ್ ಹಾಗೂ ಎ.ಸಿ ರವರಿಗೆ ಅರ್ಜಿ ಕೊಟ್ಟಿರುವುದಿಲ್ಲ ಎಂದರೆ ಸರಿ. ಪಹಣಿಗಳಲ್ಲಿ ಬರೆದ ವಿಷಯ ಸರಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಬದುಕಿದ್ದ ಕಾಲಕ್ಕೆ ನಾವೆಲ್ಲರೂ ಒಟ್ಟಿಗೆ ಇದ್ದು ನಂತರ 2003-04 ರವರೆಗೆ ಒಟ್ಟಿಗೆ ಇದ್ದೇವು ಎಂದರೆ ಸರಿಯಲ್ಲ. 2003-04 ನೇ ಸಾಲಿನಲ್ಲಿ ನಮ್ಮ ಮೂರು ಜನ ಅಣ್ಣ ತಮ್ಮಂದಿರ ಮದುವೆ ಆಗಿದ್ದವು ಎಂದರೆ ಸಾಕ್ಷಿ ನನ್ನ ಅಣ್ಣ ನಂಜಪ್ಪ ರವರ ಮದುವೆ ಮಾತ್ರ ಆಗಿತ್ತು ಎಂದು ಉತ್ತರಿಸಿರುತ್ತಾರೆ . ಮೂರು ಜನ ಮದುವೆ ಆಗಿದ್ದೇವು , ಮದುವೆ ಆದಾಗ ಸಂಸಾರ ದೊಡ್ಡದು ಆಗಿದ್ದು ನಮ್ಮ ಜೀವನಕೊಸ್ಕರ ನಾವು ಬೇರೆ ಬೇರೆ ಹೋಗಿದ್ದೇವು ಎಂದರೆ ಸರಿಯಲ್ಲ. ನಾನು ಕೆಲಸಕ್ಕೆ ಹೋಗಿ 30 ವರ್ಷ ಆಗಿರುತ್ತದೆ ಎಂದರೆ ಸರಿ.

5. 1 ನೇ ಪ್ರತಿವಾದಿ ಊರಿನಲ್ಲಿ ವಾಸ ಇರುತ್ತಾರೆ. ನಾನು 30 ವರ್ಷದಿಂದ ಊರಿಗೆ ಬಂದು ಹೋಗುತ್ತಾ ಇರುತ್ತೇನೆ ಎಂದರೆ ಸರಿ. ಅದೇ ರೀತಿ ವಾದಿ ಸಹ ವಾರಕ್ಕೊಮ್ಮೆ ಊರಿಗೆ ಬಂದು ಹೋಗುತ್ತಾರೆ ಎಂದರೆ ಸರಿಯಲ್ಲ. ನಾವು ಮೂರು ಜನ ದಾವಾ ಆಸ್ತಿಯ ಸ್ವಾಧೀನದಲ್ಲಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ತಂದೆ ಆಸ್ತಿ ಮತ್ತು ನಮ್ಮ ತಾತನ ಆಸ್ತಿಗಳನ್ನು ನಾವು ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. 2003-04 ನೇ ಸಾಲಿನಲ್ಲಿ ನಮ್ಮ ಅಣ್ಣ ಹಿಂದೂಪುರಕ್ಕೆ ಹೋದ ನಂತರ ನನ್ನ ತಾಯಿ , ನಂಜಪ್ಪ ಮತ್ತು ನಾನು ಸೇರಿಕೊಂಡು ದಿ. 17/01/2005 ರಂದು ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಓದಲು ಬರೆಯಲು ಬರುವುದಿಲ್ಲ ಹೆಬ್ಬೆಟ್ಟು ಹಾಕುತ್ತಾರೆ ಎಂದರೆ ಸರಿ. ನಮ್ಮ ತಾಯಿಗೆ ವ್ಯವಹಾರಿಕಾ ಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಯನ್ನು ಕರೆದುಕೊಂಡು ಹೋಗಿ ನಿಡಿ-6 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-6 ರಲ್ಲಿರುವ ಆಸ್ತಿಗಳು ನಮ್ಮ ತಾಯಿಗೆ ಸೇರಿದವು ಇರುವುದಿಲ್ಲ ಮತ್ತು ಅವರ ತವರು ಮನೆಯವರು ಕೊಟ್ಟಿರುವ ಆಸ್ತಿಗಳು ಇರುವುದಿಲ್ಲ ಎಂದರೆ ಸರಿ. ನಿಡಿ-6 ರ ಮೇಲೆ ನಾನು ಮತ್ತು 1 ನೇ ಪ್ರತಿವಾದಿ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿ. ಖಾತೆ ಬದಲಾವಣೆ

ಮಾಡಿಕೊಳ್ಳು ಸಮಯಕ್ಕೆ ನಾವು ವಾದಿಗೆ ವಿಚಾರ ತಿಳಿಸಿರುವುದಿಲ್ಲ ಎಂದರೆ ಸರಿ. ನಿಡಿ-6 ದಾಖಲೆ ಸಿಕ್ಕ ಮೇಲೆ ಖಾತೆ ಬದಲಾವಣೆ ಮಾಡಬೇಕು ಎಂದು ನಮಗೆ ಗೊತ್ತಾಯಿತು ಎಂದರೆ ಸರಿ. ನಮ್ಮ ತಂದೆ 1996 ರಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ತಂದೆ ನಮಗೆ ಯಾವುದೇ ಪತ್ರಗಳು ಕೊಟ್ಟಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

6. ನಾನು ಹಾಜರುಪಡಿಸಿರುವ ನಿಡಿ- 5 ರಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ ಹಾಗೂ ಪತ್ರ ಸಹ ನನಗೆ ಗೊತ್ತಿರುವುದಿಲ್ಲ . ಸದರಿ ದಾಖಲೆಯನ್ನು ನಮ್ಮ ವಕೀಲರಿಗೆ ನಾವೇ ಕೊಟ್ಟಿರುತ್ತೇವೆ. ನಮ್ಮ ತಂದೆ ಕೊಟ್ಟ ಪತ್ರದ ಪ್ರಕಾರ ನಾವು ಖಾತೆ ಬದಲಾವಣೆಗೆ ಅರ್ಜಿ ಕೊಟ್ಟಿಲ್ಲ ಎಂದರೆ ಸರಿ. ನಿಡಿ-5 ರಲ್ಲಿ ಮೊದಲ ಮತ್ತು ಕೊನೆ ಪುಟದಲ್ಲಿ ನಮ್ಮ ತಂದೆ ಸಹಿ ಇರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಿಡಿ-5 ರಲ್ಲಿರುವ ಸಾಕ್ಷಿದಾರರ ಬಗ್ಗೆ ನನಗೆ ಗೊತ್ತಿರುತ್ತದೆ ಎಂದರೆ ಸರಿ. ನಿಡಿ-6 ರಲ್ಲಿರುವ ಸಾಕ್ಷಿದಾರರು ನಮ್ಮ ನೆಂಟರು ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ತಾಯಿ ಆಗಲೀ ಯಾವುದೇ ವಿಲ್ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಎರಡು ಪತ್ರಗಳನ್ನು ನಾನು ಮತ್ತು ನನ್ನ ಅಣ್ಣ ವಾದಿಗೆ ಭಾಗ ಹೋಗುವುದನ್ನು ತಪ್ಪಿಸುವ ಸಲುವಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಂದೆ ಆಸ್ತಿಯಲ್ಲಿ ವಾದಿಗೆ ಭಾಗ ಇದೆಯಾ ಎಂದರೆ ಸಾಕ್ಷಿ ನಮ್ಮ ತಂದೆ ವಿಲ್ ಮಾಡಿರುವುದರಿಂದ ಭಾಗ ಬರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಮ್ಮ ತಾಯಿಗೆ ಹಾಗೂ ನಮ್ಮ ತಂದೆಗೆ ವಿಲ್ ಮಾಡುವ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಮಾಡಿರುವ ವಿಲ್ ಈ ಕೇಸಿಗಾಗಿ ಸೃಷ್ಟಿ ಮಾಡಿದ ಕಾರಣ ನಾವು ಖಾತೆ ಪಹಣಿಗೆ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ-2 ರಿಂದ 5 ನಮ್ಮ ತಾಯಿ ಮಾಡಿದ ವಿಲ್ ಆಧಾರದ ಮೇಲೆ ಖಾತೆ ಪಹಣಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ನಿಡಿ-5 ನ್ನು ಈ ದಾವೆಗೊಸ್ಕರ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-5 ರಲ್ಲಿ ಉದ್ದೇಶಪೂರ್ವಕವಾಗಿ ವಾದಿಯು ಬೇರೆ ಊರಿಗೆ ಹೋಗಿರುತ್ತಾನೆಂದು ಸೇರಿಸಿರುತ್ತೇವೆ ಎಂದರೆ ಸರಿಯಲ್ಲ.

7. 2014-15 ರಲ್ಲಿ ದಾವಾ ಆಸ್ತಿಗಳ ಸಂಬಂಧ ತಗಾದೆ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿ ವರ್ಷ ವಾದಿ 2014 ರವರೆಗೂ ಪಾಲನ್ನು ತೆಗೆದುಕೊಂಡು ಹೋಗುತ್ತಿದ್ದು ಎಂದರೆ ಸರಿಯಲ್ಲ. 2014 ರಲ್ಲಿ ನಾವು ಪಾಲು ಕೊಡುವುದಿಲ್ಲ ಎಂದು ಹೇಳಿರುತ್ತೇವೆ ಎಂದರೆ ಸಾಕ್ಷಿ ಎಂದಿಗೂ ಬಂದಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಮ್ಮ ತಂದೆಗೆ ಮೂರು ಜನ  ಮಕ್ಕಳು ಮತ್ತು ಹೆಣ್ಣು ಮಕ್ಕಳ  ಮೇಲೆ ಸಮಾನ ಪ್ರಿತಿ ಇತ್ತು ಎಂದರೆ ಸಾಕ್ಷಿ ವಾದಿಯನ್ನು ಹೊರತುಪಡಿಸಿ ಎಲ್ಲರ ಮೇಲೆ ಪ್ರಿತಿ ಇತ್ತು ಎಂದು ಉತ್ತರಿಸಿರುತ್ತಾರೆ. ನಮ್ಮ ತಂದೆ ಎಲ್ಲಾ ಮಕ್ಕಳು ಪಾಲು ತೆಗೆದುಕೊಳ್ಳಲು ಎಂದು ಆಸ್ತಿಗಳನ್ನು ಉಳಿಸಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೂ ದಾವಾ ಆಸ್ತಿಗಳಲ್ಲಿ ಸಮನಾದ ಭಾಗ ಇರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ